‘ಕಾರವಾನ್‌ಗೆ ಹೋಗಿ ಸಾರ್’ ಎಂದು ಅಸಿಸ್ಟೆಂಟ್ ಡೈರೆಕ್ಟರ್ ಹೇಳುವಾಗ, ‘ಇರು ಒಂದಿಷ್ಟು ಇಲ್ಲೇ ಸುಧಾರಿಸಿಕೊಂಡು ಹೋಗುತ್ತೇನೆ’ ಎನ್ನುವಂತೆ ಸನ್ನೆ ಮಾಡಿದರು. ಹೀರೋಯಿನ್‌ಗಳಂತೆ ಕಾಣುವ ಒಂದಿಬ್ಬರು ತಂತಮ್ಮ ಸ್ಮಾರ್ಟ್ ಫೋನ್‌ನ್ನು ಸ್ವಿಚ್ ಆನ್ ಮಾಡುತ್ತ ತಮ್ಮ ಕಾರವಾನ್ ಕಡೆಗೆ ಮಿನುಗು ಉಡುಪಿನಲ್ಲಿ ಮಿಂಚುತ್ತ ಓಡಿದರು. ಸಾಮಾನ್ಯವಾಗಿ ‘ಬ್ರೆಕ್’ ಆದಾಗ ಚಲನವಲನ ಮಾತುಕತೆ ಗೌಜು ಇರುತ್ತದೆ. ಆದರೆ ಇಲ್ಲೊಂದು ಅಸಹಜವಾದ ನಿಶ್ಶಬ್ದವಿತ್ತು. ಏಕೆಂದರೆ ಎಲ್ಲರೂ ತಂತಮ್ಮ ಮೊಬೈಲ್‌ಗಳೆಂಬ ಡಿಜಿಟಲ್ ಕೊಳಗಳಲ್ಲಿ ಗಾಳ ಹಾಕಿ ಕೂತಿದ್ದರು. ನಿಂತಲ್ಲಿ ಕುಂತಲ್ಲಿ ತಾವಿದ್ದ ಭಂಗಿಗಳಲ್ಲೇ ವಿಗ್ರಹಗಳಾಗಿ ಹೋದಂತೆ ಮೊಬೈಲ್ ವಶವಾಗಿದ್ದರು. ಮೊಬೈಲಿನ ಬೆಳಕಲ್ಲಿ ಪ್ರತಿ ಮೊಗವೂ ಕ್ಷೀಣವಾಗಿ ಬಿಳಿಚಿಕೊಂಡಿತ್ತು.

ಶರತ್‌ಚಂದ್ರ ಮಾತ್ರ ಕೈಗನ್ನಡಿ ಹಿಡಿದುಕೊಂಡು ಇನ್ನೆಲ್ಲೋ ಶೂನ್ಯದಲ್ಲಿ ನೋಟವಿಟ್ಟು ಕೂತಿದ್ದರು. ಆ ಪರಿಸರದ ಜೊತೆಗಿನ ಕಾರ್ಯ ಕಾರಣದ ನಂಟೂ ಹುಸಿದು ಹೋದಂಥ ಒಂದು ಅಪ್ರತಿಭ ವಲಯದಲ್ಲಿದ್ದರು. ತಾರುಣ್ಯವನ್ನು ಕಾಯ್ದುಕೊಳ್ಳುವಲ್ಲೇ, ಇನ್ನೂ ತರುಣರಾಗಿ ತೋರುವುದರಲ್ಲೇ, ಅವರ ಚೈತನ್ಯವೆಲ್ಲ ಬಸಿದು ಹೋದಂತಿತ್ತು. ಲೈಟ್‌ಬಾಯ್ಸ್, ಉಪ ನಿರ್ದೇಶಕರು, ನೃತ್ಯ ತಂಡದವರು, ತಾಂತ್ರಿಕ ವರ್ಗದವರು, ಟೀ ಹುಡುಗರು, ಟಚ್‌ಅಪ್ ಹುಡುಗರು ಎಲ್ಲರೂ ಸಹಜವಾದ ತಾರುಣ್ಯದಲ್ಲಿದ್ದರೆ, ಶರತ್‌ಚಂದ್ರ ಮಾತ್ರ ಒಂದು ಆರೋಪಿತ ತಾರುಣ್ಯದ ಭಾರದಲ್ಲಿ ಬಸವಳಿದಿದ್ದರು. ಕೈಗನ್ನಡಿಯಲ್ಲಿ, ಎಷ್ಟು ನಕ್ಕರೆ ನಿರಿಗೆ ಬೀಳುತ್ತದೆ, ಎಷ್ಟು ನಕ್ಕರೆ ಬೀಳುವುದಿಲ್ಲ, ಯಾವ ಕಾಲರ್ ಸ್ಟೈಲಿನಲ್ಲಿ ಕೊರಳಿನ ಮುಪ್ಪು ತೋರುವುದಿಲ್ಲ ಎಂಬುದನ್ನು ತಾಲೀಮು ಮಾಡಿ ನೋಡುತ್ತಿದ್ದರು. ನಿರ್ಜೀವ ಕ್ಯಾಮರಾದೆಡೆಗೆ ಬೀರುವಂಥ ಶುಷ್ಕನಗುವನ್ನು ತಮ್ಮೆಡೆಗೇ ಬೀರಿ ಬೀರಿ ನೋಡುತ್ತಿದ್ದರು. ವಿಲೋಮ ನಿಂತಲ್ಲೇ ಇನ್ನೂ ಸ್ತಬ್ಧನಾಗಿಬಿಟ್ಟ. ತನ್ನ ದುಪ್ಪಟ್ಟು ವಯಸ್ಸಿನ ಈ ಪ್ರಿಯ ಪಪ್ಪ ಕ್ಯಾಮರಾದೆದುರು ತನ್ನ ವಯಸ್ಸಿನವನಾಗಿರಲು ನಡೆಸಿರುವ ಹೋರಾಟದ ಆಳದ ತಬ್ಬಲಿತನ ಒಮ್ಮೆಲೇ ವಿಲೋಮನ ಅನುಭವಕ್ಕೆ ಧಾಳಾಗಿ ಬಂದಂತಾಯ್ತು. ಮನೆಯಲ್ಲಿದ್ದರೂ ಕೃತಕ ತಲೆಗೂದಲಿನ ವಿಗ್ಗನ್ನು ತೆಗೆಯದ, ದಿನಾ ಎರಡು ಬಾರಿ ಶೇವ್ ಮಾಡಿಕೊಳ್ಳುವ, ವಿಲೋಮನಿಗಿಂತ ಟ್ರೆಂಡೀಯಾದ ಶೂ, ಪ್ಯಾಂಟು, ಟೀ ಶರ್ಟುಗಳನ್ನು ಬಿಗಿಯಾಗಿ ಸಾಕ್ಸಿನಂತೆ ತೊಟ್ಟುಕೊಳ್ಳುವ, ನರ್ಸರಿ ಕೆಜಿ ದಿನಗಳ ನಂತರ ವಿಲೋಮನನ್ನೂ, ಅವನ ತಂಗಿ ವಿಭಾಳನ್ನೂ, ಯಾವ ಸಾರ್ವಜನಿಕ ಸಮಾರಂಭಗಳಿಗೂ ಕರೆದೊಯ್ಯದ, ಪಿಯುಸಿ ದಾಟಿದ ಮೇಲಂತೂ ಯಾವ ಹಿಲ್ ಸ್ಟೇಶನ್ ಲೊಕೇಶನ್‌ಗೂ ಕರೆದೊಯ್ಯದ ಈ ಅಪ್ಪನ ಹುಸಿ ತಾರುಣ್ಯದ ಈ ಪಾಡು ಅವನಿಗಂಟಿದ ಒಂದು ಶಾಪದಂತೆ ಭಾಸವಾಗತೊಡಗಿತು. ಮನೆಯಲ್ಲಿ ಮಕ್ಕಳ ಸಿ.ಇ.ಟಿ. ರ್‍ಯಾಂಕಿಂಗ್‌ಗಾಗಿ ಪರಿತಪಿಸುವ ಅಪ್ಪ, ಸೆಟ್ಟಲ್ಲಿ ಹಾಡಿ ಮರ ಸುತ್ತಿ ಕೈಯಲ್ಲಿ ನವಿಲುಗರಿ ಹಿಡಿದು ನಾಯಕಿಯ ಗಲ್ಲ ನೇವರಿಸಿ ಪ್ರೇಮದಲ್ಲಿ ಬೀಳುವ ಯುವಕ. ಈ ಎರಡು ಲೋಕಗಳ ನಡುವಿನ ನಿತ್ಯ ಸಂಚಾರ ಎಷ್ಟು ದಣಿಸಿರಬಹುದು ಅವನನ್ನು. ಇದರಲ್ಲಿ ಯಾವ ಪಾತ್ರ ಅವನ ಆತ್ಮಕ್ಕೆ ಅಂಟಿರಬಹುದು. ಅಥವಾ ಎರಡರಿಂದಲೂ ತಪ್ಪಿಸಿಕೊಂಡು ಓಡುತ್ತಿರುತ್ತಾನೋ. ಮತ್ತೆ ಮತ್ತೆ ಮನೆಯಲ್ಲಿ ಹಠಾತ್ತನೆ ಅವನು ‘ಛೆ’ ಎಂದು ಉದ್ಗರಿಸಿ ತಲೆ ಕೊಡವುತ್ತಾನೆ ಏಕೆ. ಅಥವಾ ತಕ್ಷಣ ಅರೆನಿದ್ದೆಯಲ್ಲಿ ಎದ್ದವನಂತೆ ಡೈನಿಂಗ್ ಟೇಬಲ್ ಮೇಲೆ ಅಪರಿಚಿತರಿಗೆ ಕೊಡುವಂಥ ಸದ್ದಿಲ್ಲದ ವಿಚಿತ್ರ ಮಳ್ಳುಮುಗುಳುನಗೆ ಯಾಕೆ ಕೊಡುತ್ತಾನೆ. ಅವನೊಮ್ಮೆ ಜೋರಾಗಿ ಮೈಮರೆತು ರೇಗಾಡುವಾಗ ಅಮ್ಮ ‘ಮೆಲ್ಲ... ಮೆಲ್ಲ... ಗ್ಲಾಮರ್ ಹೋದೀತು... ಗ್ಲಾಮರ್ ಹೋದೀತು...